# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

**ಸಿ.ಸಿ ನಂ. 889/2021** ಸಿ.ಡಬ್ಲ್ಯೂ -4

ಪಿ.ಡಬ್ಲ್ಯೂ -3

ಹೆಸರು ಃ ಅಬ್ದುಲ ಗಫರ

ತಂದೆಃಗಂಡ ಃ ಅಬ್ದುಲ ಸತ್ತಾರ

ವಯಸ್ಸು ಃ 64 ವರ್ಷ

ಉದ್ಯೋಗ ಃ ನಿವೃತ್ತ ಎಸ.ಐ

ವಾಸಸ್ಥಳ ಃ ಆಳಂದ

ದಿನಾಂಕಃ14.02.2025

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು 14.11.2016 ರಿಂದ 31.10.2020 ವರೆಗೆ ಅಬಕಾರಿ ನಿರೀಕ್ಷಕನಾಗಿ ಕಾರ್ಯನಿರ್ವಹಿಸಿದ್ದೇನೆ ದಿ.09.06.2020 ರಂದು ಚಾಸಾ-3 ರವರಿಂದ ಕಡತವನ್ನು ಸ್ವಿಕರಿಸಿ ದಿ.11.06.2020 ರಂದು ಆರ್.ಟಿ.ಓ. ರವರಿಗೆ ಅರ್ಜಿ ನೀಡಿ ವಾಹನದ ಮಾಲೀಕರ ಮಾಹಿತಿ ಕೇಳಿದ್ದು, ದಿ.24.06.2020 ರಾಸಾಯನಿಕ ಪರಿಕ್ಷೆಗೆ ಚಾಸಾ-5 ರವರಿಂದ 90 ಎಂಎಲನ 6 ಟೆಟ್ರಾಪ್ಯಾಕ ಕಳುಹಿಸಿರುತ್ತೇನೆ. ದಿ.25.06.2020 ರಂದು ಸ್ವಿಕೃತಿಯನ್ನು ಪಡೆದಿರುತ್ತೇನೆ. ದಿ.29.10.2020 ರಂದು ದೋ.ಪ. ಸಲ್ಲಿಸಿರುತ್ತೇನೆ. ಈಗಾಗಲೇ ಗುರುತಿಸಲಾದ ಮು.ಮಾ. ನ್ನುನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ದಿ.11.06.2021 ರಂದು ಆರ.ಟಿ.ಓ. ರವರಿಗೆ ಕಳುಹಿಸಿದ ಅರ್ಜಿಯನ್ನು ನಿಪಿ-6, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಎಫಎಸಎಲ ಗೆ ಕಳುಹಿಸಿದ ಅರ್ಜಿಯನ್ನು ತೋರಿಸಿ ಅದನ್ನು ಗುರುತಿಸಿದ್ದು ವರದಿಯನ್ನು ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿ 1 ಲೀಟರ ಬಾಟಲನ್ನು ನೋಡಿ ಗುರುತಿಸಿದ ಕಾರಣ ಬಾಟಲನ್ನು ಮು.ಮಾ.1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಎಫಎಸಎಲ ವರದಿಯನ್ನು ತೋರಿಸಿ ಅದನ್ನು ಗುರುತಿಸಿದ್ದು ವರದಿಯನ್ನು ನಿಪಿ-8, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

**ಪಾ. ಸವಾಲುಃ– ಆರೋಪಿತರ ಪರ ಶ್ರೀ ಕೆ.ಎಂ. ವಕೀಲರಿಂದಃ**

ದಿ.16.03.2020 ರಂದು ಘಟನೆ ಆಗಿದ್ದು ನೀವು ಕಡತವನ್ನು ದಿ.09.06.2020 ರಂದು ಮೂರು ತಿಂಗಳು ತಡವಾಗಿ ಪಡೆದುಕೊಂಡಿದ್ದು ಅದಕ್ಕಿಂತ ಮುಂಚೆ ಯಾರು ಪ್ರಕರಣ ತನಿಖೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-3 ರವರು ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಮತ್ತು ಚಾಸಾ-3 ಸಹೋದ್ಯೋಗಿಗಳು ಎಂದರೆ ಸರಿ. ನಾನು ದೋ.ಪ. ಸಲ್ಲಿಸುವಾಗ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದು ಕಂಡು ಬಂದ್ದಿದ್ದರೂ ಸಹ ಚಾಸಾ-3 ನಮ್ಮ ಮೇಲಾಧಿಕಾರಿ ಆದ ಕಾರಣ ಅವರ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಆರೋಪಿ ವಿರುದ್ಧ ದೊ.ಪ. ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ.

**<u>ಮರು ವಿಚಾರಣೆ:</u>** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.